**ಅಧಿಕ ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ ನ್ಯಾಯಾಲಯ, ಗುಬ್ಬಿ**

**ಓ ಎಸ್ ನಂ. 152/2020 ಪಿ .ಡಬ್ಲ್ಯೂ 1**

**ದಿನಾಂಕಃ 29.05.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ. KCN ವಕೀಲರಿಂದಃ**

ನಾನು ಬಿ.ಎ ಪದವಿಧರ. ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ದಾಖಲೆಗಳನ್ನು ತಿಳಿದುಕೊಂಡಿರುತ್ತೇನೆ. ನಿಪಿ.7 ರಿಂದ 10 ರಲ್ಲಿ ಶ್ರೀ ರಂಗನಾಥ ಪ್ರೌಢಶಾಲೆ ಎಂದು ನಮೂದು ಆಗಿರುತ್ತದೆ ಎಂದರೆ ಸರಿ. ನಾನು ಸದರಿ ಶ್ರೀ ರಂಗನಾಥ ಪ್ರೌಢಶಾಲೆಯ ಕಾರ್ಯದರ್ಶಿ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆಯನ್ನು ಹಾಜರುಪಡಿಸಿದ್ದೇನೆ. ನಿಪಿ.7 ರಿಂದ 14 ರಲ್ಲಿ ಪ್ರತಿಯೊಂದು ಖಾತೆ ನಂಬರ್ ಗೆ ಪ್ರತ್ಯಕವಾಗಿ ಚಕ್ಕುಬಂದಿಗಳು ನಮೂದು ಆಗಿದ್ದು ಅದನ್ನು ನನ್ನ ವಾದ ಪತ್ರದಲ್ಲಿಯೂ ಸಹ ನಾನು ನಮೂದಿಸಿರುತ್ತೇನೆ. ಸದರಿ ನಿಪಿ.7 ರಿಂದ 14 ದಾಖಲೆಗಳ ಮೇಲೆ ಸಂಬಂಧಪಟ್ಟ ಅಧಿಕಾರಿ **"ಈ ಕಂದಾಯ ಸ್ವೀಕೃತಿಯು ಈ ಆಸ್ತಿಯ ಮೇಲೆ ತೆರಿಗೆ ಪಾವತಿದಾರರಿಗೆ ಯಾವುದೇ ರೀತಿಯ ಮಾಲೀಕತ್ವದ ಹಕ್ಕನ್ನು ದೃಢೀಕರಿಸುವುದಿಲ್ಲ"** ಎಂದು ನಮೂದು ಮಾಡಿರುತ್ತಾರೆ ಎಂದರೆ ಸರಿ. ದೊಡ್ಡಕೆಂಚಯ್ಯರವರಿಗೆ ಸೇರಿದ ಆಸ್ತಿಯ ಬಗ್ಗೆ ನನಗೆ ಪೂರ್ಣ ಮಾಹಿತಿ ಇಲ್ಲ. ಸದರಿ ಆಸ್ತಿ ಮೂಲತಃ ಸರ್ಕಾರಕ್ಕೆ ಸೇರಿದ್ದು ಎಂದರೆ ಸರಿ. ಸದರಿ ಆಸ್ತಿ ದೊಡ್ಡಕೆಂಚಯ್ಯರವರಿಗೆ ಸರ್ಕಾರದಿಂದ ಮಂಜೂರಾಗುವ ಕಾಲದಲ್ಲಿ ಅದರ ಸ.ನಂಬರ್ 16 ಎಂದು ಇತ್ತು ಎಂದರೆ ಸರಿ. ನಂತರ ದೊಡ್ಡಕೆಂಚಯ್ಯರವರು ಸದರಿ ಜಮೀನನ್ನು ಪೋಡಿ ಮಾಡಿಸಿಕೊಂಡಾಗ ಅದರ ಸ.ನಂಬರ್ 78 ಎಂದು

ಬದಲಾಯಿತು ಎಂದರೆ ಸರಿ. ಸದರಿ ಜಮೀನಿನ ಒಟ್ಟು ವಿಸ್ತೀರ್ಣ 1 ಎಕರೆ ಎಂದರೆ ಸರಿ. ಸದರಿ 1 ಎಕರೆ ಜಮೀನಿನ ಉತ್ತರಕ್ಕೆ ರಾಷ್ಟ್ರೀಯ ಹೆದ್ದಾರಿ 206 ಇರುತ್ತದೆ ಎಂದರೆ ಸರಿ. ಪಶ್ಚಿಮಕ್ಕೆ ಬಿದರೆಹಳ್ಳಿ ಕಾವಲ್ ಗೆ ಹೋಗುವ ರಸ್ತೆ ಇರುತ್ತದೆ ಎಂದರೆ ಸಾಕ್ಷಿ ಅದಕ್ಕಿನ್ನ ಮುನ್ನ ಬಸಪ್ಪರವರ ಜಮೀನು ಇರುತ್ತದೆ ಎನ್ನುತ್ತಾರೆ. ಪೂರ್ವಕ್ಕೆ ಸ.ನಂಬರ್.77 ಇರುತ್ತದೆ ಎಂದರೆ ಸರಿ. ದಕ್ಷಿಣಕ್ಕೆ ಖಾಸಗಿ ಇಡುವಳಿದಾರರು ಇರುತ್ತಾರೆ ಎಂದರೆ ಸರಿ. ಸದರಿ ದೊಡ್ಡಕೆಂಚಯ್ಯರವರ ಮರಣದ ನಂತರ ಸ.ನಂ.78 ಜಮೀನಿನ ಖಾತೆ ಮತ್ತು ಪಹಣಿ ಅವರ ವರಸುದಾರರ ಹೆಸರಿಗೆ ವರ್ಗಾವಣೆಯಾಗಿದ್ದು ಈಗಲೂ ಸಹ ಅವರುಗಳ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿ. ಇದರ ನಂತರ ದೊಡ್ಡಕೆಂಚಯ್ಯರವರ ವರಸುದಾರರು ಸ.ನಂ.78 ರ ಸ್ವಾಧೀನಾನುಭದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ನಾವು ಸ್ವಾಧೀನದಲ್ಲಿ ಇರುತ್ತೇವೆ ಎನ್ನುತ್ತಾರೆ.

ದೊಡ್ಡಕೆಂಚಯ್ಯರವರು ಅನಕ್ಷರಸ್ತರಾದ್ದರಿಂದ ಅವರು ತಮ್ಮ ಹೆಬ್ಬಿಟ್ಟಿನ ಗುರುತನ್ನು ಹಾಕುತ್ತಾರೆ ಎಂದರೆ ಸಾಕ್ಷಿ ಅವರು ಸಹಿ ಮಾಡಬಲ್ಲರು ಎನ್ನುತ್ತಾರೆ. ಸದರಿ ದೊಡ್ಡಕೆಂಚಯ್ಯರವರು ಎಂದಿಗೂ ಸಹಿ ಮಾಡುತ್ತಿರಲಿಲ್ಲ ತಮ್ಮ ಹೆಬ್ಬಿಟ್ಟಿನ ಗುರುತನ್ನು ಮಾತ್ರ ಹಾಕುತ್ತಿದ್ದರು ಎಂದರೆ ಸರಿಯಲ್ಲ. ನಿಪಿ.1 ಅನ್ನು ಬರೆದುಕೊಡುವ ಸಮಯದಲ್ಲಿ ನಾನು ಕಾರ್ಯದರ್ಶಿ ಆಗಿರಲಿಲ್ಲ. ಸಾಕ್ಷಿ ಸ್ವತಃ ನುಡಿಯುವುದೇನೆಂದರೆ 2011 ರಲ್ಲಿ ವಾದಿ ಸೊಸೈಟಿ Amalgamation ಅಗಿರುತ್ತದೆ ಎನ್ನುತ್ತಾರೆ, ಅದಕ್ಕೆ ಹಿಂದಿನಿಂದಲೂ ಸಹ ವಾದಿ ಸೊಸೈಟಿ ಅಸ್ತಿತ್ವದಲ್ಲಿ ಇರುತ್ತದೆ ಎನ್ನುತ್ತಾರೆ. ದೊಡ್ಡಕೆಂಚಯ್ಯರವರಿಗೆ ಸರ್ಕಾರದಿಂದ ನೀಡಿದ ಹಕ್ಕು ಪತ್ರವನ್ನು ನಾನು ಪರಿಶೀಲಿಸಿರುತ್ತೇನೆ ಎಂದರೆ ಸರಿ. ಸದರಿ ಹಕ್ಕು ಪತ್ರ ದಿಃ 03.01.2009 ರಂದು ದೊಡ್ಡಕೆಂಚಯ್ಯರವರ ಹೆಸರಿಗೆ ನೀಡಲಾಗಿತ್ತು ಎಂದರೆ ಸಾಕ್ಷಿ ದೊಡ್ಡಕೆಂಚಯ್ಯರವರಿಗೆ 2009 ರ

ಹಿಂದೆಯೇ ಸ.ನಂ.78 ಮಂಜೂರಾಗಿತ್ತು ಎನ್ನುತ್ತಾರೆ. ಸದರಿ ಹಕ್ಕು ಪತ್ರದಲ್ಲಿ ಇರುವ ಹಕ್ಕು ಪತ್ರದಲ್ಲಿ ಇರುವ ಚಕ್ಕುಬಂದಿಗೆ ವಾದ ಪತ್ರದಲ್ಲಿರುವ ಚಕ್ಕುಬಂದಿಗೂ ತಾಳೆ ಇರುವುದಿಲ್ಲ ಎಂದರೆ ಸಾಕ್ಷಿ ಪೋಡಿ ಆದ ನಂತರ ಚಕ್ಕುಬಂದಿ ಬದಲಾಗಿರುತ್ತದೆ ಎನ್ನುತ್ತಾರೆ.

ನಿಪಿ.7 ರಿಂದ 14 2020-21 ನೇ ಸಾಲಿಗೆ ಸಂಬಂಧಪಟ್ಟ ದಾಖಲಾತಿಗಳು ಎಂದರೆ ಸರಿ. ಈ ದಾವೆಯನ್ನು 2020 ರಲ್ಲಿ ಸಲ್ಲಿಸಿರುತ್ತೇನೆ ಎಂದರೆ ಸರಿ. 2014 ರಿಂದ ಎಲ್ಲಾ ಇಲಾಖೆಗಳು ಗಣಕೀಕೃತವಾಗಿದ್ದು ಇ-ಖಾತೆಯನ್ನು ನೀಡುತ್ತಿದ್ದಾರೆ ಎಂದರೆ ಸರಿ. ನಿಪಿ.2 ರಿಂದ 14 ಈ ದಾವೆಯನ್ನು ಸಲ್ಲಿಸುವ ಕಾರಣಕ್ಕಾಗಿ ಪಂಚಾಯಿತಿ ಅವರ ಜೊತೆ ಶಾಮೀಲು ಆಗಿ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಿಪಿ.1 ದಾನ ಪತ್ರವನ್ನು ದೊಡ್ಡಕೆಂಚಯ್ಯರವರು ಬರೆದುಕೊಟ್ಟ ನಂತರ ಸದರಿ ದಾಖಲಾತಿಗಳು ನಮ್ಮ ಸಂಸ್ಥೆಯ ಹೆಸರಿನಲ್ಲಿ ಇರುತ್ತದೆ ಎನ್ನುತ್ತಾರೆ.

2011 ರಿಂದ ಶ್ರೀ ರಂಗನಾಥ ಎಜುಕೇಶನ್ ಸೊಸೈಟಿಗೆ ಸಂಬಂಧಿಸಿದಂತೆ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ, ನನಗೆ ಹಾಜರುಪಡಿಸಲು ಯಾವುದೇ ತೊಂದರೆ ಇರುವುದಿಲ್ಲ. ನಿಪಿ.7 ರಿಂದ 14 ರ ಸ.ನಂ.78 ರ ವಿಸ್ತೀರ್ಣಕ್ಕೂ ದಾವಾಸ್ವತ್ತಿನ ವಿಸ್ತೀರ್ಣಕ್ಕೂ ವ್ಯತ್ಯಾಸ ವಿರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾವು ಸರ್ಕಾರಿ ಜಾಗವನ್ನು ಒತ್ತುವರಿ ಮಾಡಿಕೊಂಡಿರುತ್ತೇವೆ ಎನ್ನುತ್ತಾರೆ. ಪ್ರತಿವಾದಿಗಳು ನಮ್ಮ ಸಂಸ್ಥೆಗೆ ಯಾವುದೇ ತೊಂದರೆ ನೀಡದೇ ಇದ್ದರು ದಾವಾಸ್ವತ್ತನ್ನು ಲಪಟಾಯಿಸಲು ಸುಳ್ಳು ಸಾಕ್ಷಿ ಸಲ್ಲಿಸಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**(ಮುಂದುವರೆದ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು, ಸಮಯವಕಾಶ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)

ಓ . ಹೇ. ಕೇ. ಸರಿ. ಇದೆ

ಅಧಿಕ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್ ಸಿ , ಗುಬ್ಬಿ.